ಕರ್ನಾಟಕ ಸರ್ಕಾರ
(ಪೊಲೀಸ್ ಇಲಾಖೆ)

ಸಂಖ್ಯೆ: 12/ಸಿಬ್ಬಂದಿ-4/2008-09
ಸಂಖ್ಯೆ:ಓ.ಬಿ/ 34 /2018

ದಿನಾಂಕ: 16 .02.2018.

## :: ತಿದ್ದುಪಡಿ ಆದೇಶ ::

ವಿಷಯ: ಗ್ರಾಮೀಣ ಕೃಪಾಂಕ ರಹಿತ ಪರಿಷ್ಕೃತ ಆಯ್ಕೆ ಪಟ್ಟಿಯಲ್ಲಿ ಆಯ್ಕೆಯಾದ ನೌಕರರ ಜೇಷ್ಠತೆಯನ್ನು ಮರು ನಿಗಧಿ ಪಡಿಸಿ, ತಾತ್ಕಾಲಿಕ ತಿದ್ದುಪಡಿ ಆದೇಶವನ್ನು ಹೊರಡಿಸುವ ಬಗ್ಗೆ.

ಉಲ್ಲೇಖ:
(1) ಈ ಕಛೇರಿಯ ತಿದ್ದೋಲೆ ಸಮಸಂಖ್ಯೆ ದಿನಾಂಕ:06.04.2013.
(2) ರಿಟ್ ಅರ್ಜಿ(ಸಿವಿಲ್) ಸಂಖ್ಯೆ:386/2014 ಶ್ರೀ ಎಸ್.ಆರ್.ಮಾಣಿಕ್ಯ ಮತ್ತು ಇತರರು ವಿರುದ್ಧ ಕರ್ನಾಟಕ ರಾಜ್ಯ ಉಚ್ಛ ನ್ಯಾಯಾಲಯ ಪ್ರಕರಣದಲ್ಲಿ ಮಾನ್ಯ ಸರ್ವೋಚ್ಛ ನ್ಯಾಯಾಲಯದ ಆದೇಶ ದಿನಾಂಕ:20.11.2015.
(3) ಈ ಕಛೇರಿಯ ಅಂತಿಮ ಜೇಷ್ಠತಾ ಪಟ್ಟಿ ಸಂಖ್ಯೆ:53 /ಸಿಬ್ಬಂದಿ-3/2017-18(ಭಾಗ-2), ದಿನಾಂಕ:21.11.2017.
(4) ಸರ್ಕಾರದ ಪತ್ರ ಸಂಖ್ಯೆ:ಸಿಆಸುಇ 20 ಸೆನೆನಿ 2013, ದಿನಾಂಕ: 20.10.2016.
(5) ಸರ್ಕಾರದ ಪತ್ರ ಸಂಖ್ಯೆ:ಒಇ 127 ಪೊಸಿಪ 2017, ದಿನಾಂಕ: 03.01.2018.

* * * * *

ಈ ಕಛೇರಿಯ ಉಲ್ಲೇಖಿತ(1)ರ ತಿದ್ದುಪಡಿ ಆದೇಶದಲ್ಲಿ ಗ್ರಾಮೀಣ ಕೃಪಾಂಕ ರಹಿತವಾಗಿ ಪಟ್ಟಿ ಪರಿಷ್ಕರಿಸಿದಾಗ ಪಟ್ಟಿಯಲ್ಲಿ ಸ್ಥಾನ ಪಡೆದಿದ್ದು, ಇದೇ ವಿಷಯಕ್ಕೆ ಸಂಬಂಧಿಸಿದಂತೆ ಕೆ.ಎ.ಟಿ ಹಾಗೂ ಉಚ್ಛನ್ಯಾಯಾಲಯಗಳಲ್ಲಿ ಶ್ರೀ ಗಂಜಿಗಟ್ಟಿ, ಶ್ರೀಮತಿ ಡಿ.ಎನ್.ನಾಗಲಕ್ಷ್ಮಿ ಮತ್ತು ಶ್ರೀ ಎಂ.ಕೆ.ಜಗದೀಶ್ ರವರುಗಳು ಸಲ್ಲಿಸಿದ್ದ ಅರ್ಜಿಗಳ ತೀರ್ಪಿನಲ್ಲಿ ನೀಡಲ್ಪಟ್ಟಿರುವ ಆದೇಶಗಳಲ್ಲಿ ಗ್ರಾಮೀಣ ಕೃಪಾಂಕ ರಹಿತವಾಗಿ ಪರಿಷ್ಕರಿಸಿದಾಗ ಹೊಸದಾಗಿ ಆಯ್ಕೆಪಟ್ಟಿಯಲ್ಲಿ ಸ್ಥಾನ ಪಡೆದು ತಡವಾಗಿ ನೇಮಕಾತಿ ಆದೇಶಗಳನ್ನು ಪಡೆದಿದ್ದರೂ ಸಹ "persons who are appointed by virtue of the judgement of the Apex Court are entitled to seniority from the date of appointment of those candidates with rural weightage were appointed and in whose place. now they are appointed. However, for other benefits, in particular monetory benefits from the appointment order, is the relevant date."ಎಂಬುದಾಗಿರುತ್ತದೆ. ಈ ಎಲ್ಲಾ ಅಂಶಗಳನ್ನು ಪರಿಶೀಲಿಸಿ, ಗ್ರಾಮೀಣ ಕೃಪಾಂಕ ರಹಿತವಾಗಿ ಪಟ್ಟಿ ಪರಿಷ್ಕರಿಸಿದಾಗ ಸ್ಥಾನ ಪಡೆದ 14 ಆರ್.ಎಸ್.ಐ ರವರಿಗೆ ಈ ಕಛೇರಿಯ ಅಂತಿಮ ಜೇಷ್ಠತಾ ಪಟ್ಟಿಯಲ್ಲಿ ದಿನಾಂಕ:04.01.1999 ಎಂಬುದಾಗಿ ತಿದ್ದುಪಡಿ ಮಾಡಿ ಆದೇಶಿಸಲಾಗಿತ್ತು.

ಉಲ್ಲೇಖಿತ(2)ರ ರಿಟ್ ಅರ್ಜಿ ಸಂಖ್ಯೆ(ಸಿವಿಲ್)386/2014 ಶ್ರೀ ಎಸ್.ಆರ್.ಮಾಣಿಕ್ಯ ಮತ್ತು ಇತರರು ವಿರುದ್ಧ ಕರ್ನಾಟಕ ರಾಜ್ಯ ಉಚ್ಛ ನ್ಯಾಯಾಲಯ ಪ್ರಕಣದಲ್ಲಿ ಮಾನ್ಯ ಸರ್ವೋಚ್ಛ ನ್ಯಾಯಾಲಯದ ದಿನಾಂಕ:20.11.2015ರ ಆದೇಶದಲ್ಲಿ ಈ ಕೆಳಕಂಡಂತೆ ತೀರ್ಪು ನೀಡಿದೆ.

"...... The controversy as to what should be an effective date of appointment of the petitioners is, in our opinion, squarely covered by the direction already issued by this Court in the paragraph extracted above. That is because the appointment of the petitioners have come to be made pursuant to the order passed by this Court which in no uncertain terms stipulates that the same will take effect from the date of the issuance of the orders of appointment. The expression " will be taken from the date of issuance of the order of appointment" is much too clear to admit of any equivocation. **The spirit and purport of the said direction is that the appointments will not be given retrospective effect nor will such appointments count for seniority over candidates who had already been appointed to the cadre."**

ಈ ಸಂಬಂಧವಾಗಿ ಸರ್ಕಾರದ ಸ್ಪಷ್ಟೀಕರಣ ಕೋರಲಾಗಿ, ಉಲ್ಲೇಖಿತ(4) ಮತ್ತು (5)ರ ಸರ್ಕಾರದ ಪತ್ರಗಳಲ್ಲಿ ಗ್ರಾಮೀಣ ಕೃಪಾಂಕ ರಹಿತ ಪರಿಷ್ಕೃತ ಆಯ್ಕೆ ಪಟ್ಟಿಯಲ್ಲಿ ಆಯ್ಕೆಯಾದ ನೌಕರರ ಜೆಷ್ಟತೆ ನಿಗಧಿಪಡಿಸುವ ಸಂಬಂಧವಾಗಿ ಸುತ್ತೋಲೆ ಸಂಖ್ಯೆ: ಸಿಆಸುಇ 20 ಸೆನೆನಿ 2013, ದಿನಾಂಕ:20.10.2016 ಮತ್ತು ಸುತ್ತೋಲೆ ಸಂಖ್ಯೆ:ಸಿಆಸುಇ 45 ಸೆನೆನಿ 2003, ದಿನಾಂಕ:02.07.2003ರ ಪ್ರಕಾರ ನಿಯಮಾನುಸಾರ ಕ್ರಮ ಕೈಗೊಳ್ಳಲು ನಿರ್ದೇಶನವಾಗಿರುತ್ತದೆ.

ಸರ್ಕಾರದ ಸುತ್ತೋಲೆ ಸಂಖ್ಯೆ:ಸಿಆಸುಇ 45 ಸೆನೆನಿ 2003, ದಿನಾಂಕ:02.07.2003ರಲ್ಲಿ ಈ ಕೆಳಕಂಡಂತೆ ಕ್ರಮ ಕೈಗೊಳ್ಳಲು ಸೂಚನೆ ಇರುತ್ತದೆ.

(1) ದಿನಾಂಕ:11.11.1998ರ ನಂತರ ಗ್ರಾಮೀಣ ಕೃಪಾಂಕದ ಸೌಲಭ್ಯದೊಂದಿಗೆ ನೇಮಕಾತಿ ಹೊಂದಿರುವ ಎಲ್ಲಾ ಅಭ್ಯರ್ಥಿಗಳ ಆಯ್ಕೆ ಪಟ್ಟಿಗಳನ್ನು ಗ್ರಾಮೀಣ ಕೃಪಾಂಕ ರಹಿತವಾಗಿ ಪರಿಷ್ಕರಿಸಿ, ಪರಿಷ್ಕೃತ ಆಯ್ಕೆ ಪಟ್ಟಿಗಳನ್ನು ಪ್ರಕಟಿಸಲು ಕ್ರಮ ತೆಗೆದುಕೊಳ್ಳತಕ್ಕದ್ದು.

(2) ಪರಿಷ್ಕೃತ ಆಯ್ಕೆ ಪಟ್ಟಿಯಲ್ಲಿ ಸ್ಥಾನ ಪಡೆಯಲಾಗದ ಅಭ್ಯರ್ಥಿಗಳನ್ನು ಸೇವೆಯಿಂದ ತೆಗೆದುಹಾಕಲು ಕ್ರಮ ತೆಗೆದುಕೊಳ್ಳತಕ್ಕದ್ದು.

(3) ಪರಿಷ್ಕೃತ ಆಯ್ಕೆ ಪಟ್ಟಿಯಲ್ಲಿ ಹೊಸದಾಗಿ ಸೇರ್ಪಡೆಯಾದ ಅಭ್ಯರ್ಥಿಗಳನ್ನು ಸೇವೆಯಿಂದ ತೆಗೆದುಹಾಕಿದ ಅಭ್ಯರ್ಥಿಗಳ ಸ್ಥಾನದಲ್ಲಿ ಭವಿಷ್ಯವರ್ತಿಯಾಗಿ ಜಾರಿಗೆ ಬರುವಂತೆ ನೇಮಕಾತಿ ಮಾಡಲು ಕ್ರಮ ತೆಗೆದುಕೊಳ್ಳುವುದು.

ಆದ್ದರಿಂದ, ಈ ಕಛೇರಿಯ ಉಲ್ಲೇಖಿತ(1)ರ ತಿದ್ದುಪಡಿ ಆದೇಶವನ್ನು ರದ್ದುಗೊಳಿಸಿ, ಈ ಕೆಳಗೆ ತಿಳಿಸಿರುವ ಕಾಲಂ (4)ರಲ್ಲಿ ನೀಡಲಾದ ಅಂತಿಮ ಜೇಷ್ಠತಾ ಪಟ್ಟಿಯ ದಿನಾಂಕಗಳನ್ನು ಮಾನ್ಯ ಭಾರತ ಸರ್ಕಾರದ ಸರ್ವೋಚ್ಛ ನ್ಯಾಯಾಲಯ ಮತ್ತು ಸರ್ಕಾರದ ಆದೇಶ ಮತ್ತು ನಿರ್ದೇಶನಗಳನ್ವಯ ಈ ಕೆಳಕಂಡ ಆರ್.ಎಸ್.ಐ ರವರಿಗೆ ಕರ್ತವ್ಯಕ್ಕೆ ವರದಿ ಮಾಡಿದ ದಿನಾಂಕಗಳನ್ನು ಪರಿಗಣಿಸಿ, ಕಾಲಂ(5) ರಲ್ಲಿ ತಿಳಿಸಿರುವ ಜೇಷ್ಠತೆ ಕ್ರಮ ಸಂಖ್ಯೆ ನೀಡಿ ಈ ಕಛೇರಿಯ ಉಲ್ಲೇಖಿತ(3)ರ ಅಂತಿಮ ಜೇಷ್ಠತಾ ಪಟ್ಟಿಯಲ್ಲಿ ತಿದ್ದುಪಡಿ ಮಾಡಲು ಉದ್ದೇಶಿಸಲಾಗಿದೆ.

| ಕ್ರ.ಸಂ. | ಪಿ.ಎಸ್.ಐ ರವರ ಹೆಸರು (ಶ್ರೀಯುತರು) | ಕರ್ತವ್ಯಕ್ಕೆ ವರದಿ ಮಾಡಿದ ದಿನಾಂಕ | ಹಾಲಿ ಅಂತಿಮ ಜೇಷ್ಠತಾ ಪಟ್ಟಿಯಲ್ಲಿನ ಜೇಷ್ಠತೆ | ಮಾನ್ಯ ನ್ಯಾಯಾಲಯ ಮತ್ತು ಸರ್ಕಾರದ ನಿರ್ದೇಶನದಂತೆ ನಿಗದಿಗೊಳಿಸ ಬೇಕಾದ ಜೇಷ್ಠತೆ |
|---|---|---|---|---|
| 1 | 2 | 3 | 4 | 5 |
| 1 | K.R.SHIVAPRAKASH | 26.08.2003 | 541 | 649 - A |
| 2 | J.SURESH RAJU | 26.08.2003 | 542 | 649 – B |
| 3 | MAHESHWARAGOWDA | 26.08.2003 | 543 | 649 – C |
| 4 | K.R.GOPIKRISHNA | 26.08.2003 | 544 | 649 – D |
| 5 | MAHADEVAPPA MARUTI YADVAD | 26.08.2003 | 545 | 649 - E |
| 6 | T.T.KRISHNA | 26.08.2003 | 546 | 649 – F |
| 7 | R.RAVIPRAKASH | 26.08.2003 | 547 | 649 – G |
| 8 | RAVINDRA KAMANNA NAIKODI | 26.08.2003 | 548 | 649 – H |
| 9 | GAWKAR SHRAVANA UMESH | 26.08.2003 | 549 | 649 – I |
| 10 | Y.MUDDURAJ | 26.08.2003 | 550 | 649 – J |
| 11 | M.N.RAVISHNAKAR | 26.08.2003 | 551 | 649 – K |
| 12 | K.N.SURESH | 26.08.2003 | 552 | 649 – L |
| 13 | A.AMANUALLA | 26.08.2003 | 553 | 649 – M |
| 14 | M.L.KRISHNAMURTHI | 26.08.2003 | 554 | 649 - N |

ಈ ತಾತ್ಕಾಲಿಕ ತಿದ್ದುಪಡಿ ಆದೇಶದ ಸಂಬಂಧವಾಗಿ ರಾಜ್ಯದ ಎಲ್ಲಾ ಕಮೀಷನರೇಟ್/ವಲಯಾಧಿಕಾರಿ/ಘಟಕಾಧಿಕಾರಿಗಳು ನಿಮ್ಮ ಘಟಕ/ವಲಯ/ಕಮೀಷನರೇಟ್ ವ್ಯಾಪ್ತಿಯ ಆರ್.ಎಸ್.ಐ/ಆರ್.ಪಿ.ಐ/ಪಿ.ಐ(ಸಿವಿಲ್) ರವರ ಗಮನಕ್ಕೆ ತಂದು ಆಕ್ಷೇಪಣೆಗಳೇನಾದರೂ ಇದ್ದಲ್ಲಿ 7 ದಿನಗಳ ಒಳಗಾಗಿ ನೇರವಾಗಿ ಪ್ರಧಾನ ಕಛೇರಿಗೆ ಸಲ್ಲಿಸಲು ಸೂಚಿಸಲು ಕೋರಿದೆ. ನಂತರ ಬರುವ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲವೆಂದು ತಿಳಿಯಪಡಿಸಲಾಗಿದೆ.

"ಡಿ.ಜಿ. ಮತ್ತು ಐ.ಜಿ.ಪಿ.ರವರಿಂದ
ಅನುಮೋದಿಸಲ್ಪಟ್ಟಿದೆ"

(ಪಿ.ಹರಿಶೇಖರನ್)
ಐ.ಜಿ.ಪಿ(ಕೇಂದ್ರಸ್ಥಾನ-1)
ಡೈರೆಕ್ಟರ್ ಜನರಲ್ ಮತ್ತು ಇನ್ಸ್‌ಪೆಕ್ಟರ್
ಜನರಲ್ ಆಫ್ ಪೊಲೀಸ್ ರವರ ಪರವಾಗಿ.

**ರವರಿಗೆ ಅಗತ್ಯ ಕ್ರಮಕ್ಕಾಗಿ:-**

(1) ಸಂಬಂಧಪಟ್ಟ ಆರ್.ಎಸ್.ಐ/ಆರ್.ಪಿ.ಐ/ಪಿ.ಐ(ಸಿವಿಲ್) ರವರಿಗೆ ಕಮೀಷನರೇಟ್/ವಲಯಾಧಿಕಾರಿಗಳು/ಘಟಕಾಧಿಕಾರಿಗಳ ಮುಖಾಂತರ.

(2) ಎಲ್ಲಾ ಕಮೀಷನರೇಟ್‌ರವರಿಗೆ.

(3) ಎಲ್ಲಾ ವಲಯಾಧಿಕಾರಿಗಳಿಗೆ.

(4) ಎಲ್ಲಾ ಘಟಕಾಧಿಕಾರಿಗಳಿಗೆ.

(5) ಹೆಚ್ಚುವರಿ ಆರಕ್ಷಕ ಮಹಾನಿರ್ದೇಶಕರು, ಗಣಕವಿಭಾಗ, ಬೆಂಗಳೂರು ರವರಿಗೆ ಪೊಲೀಸ್ ವೆಬ್‌ಸೈಟ್‌ನಲ್ಲಿ ಪ್ರಕಟಣೆಯ ಅಗತ್ಯ ಕ್ರಮಕ್ಕಾಗಿ.

(6) ಆದೇಶ ಪುಸ್ತಕ.